ನೀನು ಯಾರೋ ತಿಳಿಯದು. ಹೀಗೆ ಕೂಗಬೇಡ. ನಿನಗೇನು ಬೇಕು ಹೇಳು. ಸಾಧ್ಯವಾದರೆ ನಾವು ಊರಿನವರೆಲ್ಲ ಸೇರಿಕೊಡುತ್ತೇವೆ. ನೀನು ಹೀಗೆ ಕೂಗುವುದರಿಂದ ನಮ್ಮ ಊರ ಜನರಿಗೆ ತುಂಬ ತೊಂದರೆ ಆಗುತ್ತಿದೆ. ಮಕ್ಕಳು ಹೆದರಿ ಅಳುತ್ತಿದ್ದಾರೆ. 'ದಯವಿಟ್ಟು ಕೂಗುವುದನ್ನು ನಿಲ್ಲಿಸು' ಎಂದ ಜಯಣ್ಣ.

ಪ್ರಾಣಿ ಹಹಹ ಎಂದು ಗಹಗಹಿಸಿ ನಕ್ಕಿತು. 'ನನಗೆ ಕೂಗುವುದೇ ಖುಷಿ. ಜನರನ್ನು ಹೆದರಿಸಿದ ರೇನೇ ನನ್ನ ಮನಸ್ಸಿಗೆ ಸಂತೋಷ' ಎಂದು ಇನ್ನಷ್ಟು ಜೋರಾಗಿ ಕೂಗುತ್ತ ಮೇಲೆದ್ದು ಬರಲು ಹೆಜ್ಜೆ ಎತ್ತಿತು. ತನ್ನ ಕಿವಿಗಳನ್ನು ಭದ್ರಪಡಿಸಿಕೊಂಡಿದ್ದರೂ ಇನ್ನು ತನ್ನ ಎರಡೂ ಕಿವಿಗಳೂ ಒಡೆದು ಹೋಗುತ್ತವೆ ಎನಿಸಿತು ಜಯಣ್ಣನಿಗೆ. ಆ ಪ್ರಾಣಿಗೆ ಬೇಗ ಎದ್ದು ನಿಲ್ಲಲು ಕಷ್ಟವಿತ್ತು. ಅದು ಮೇಲೇಳಲೆಂದು ಮುಂದೆ ಬಗ್ಗಿದಾಗ ಜಯಣ್ಣ ಅಲ್ಲಿಂದ ಓಡುತ್ತ ಓಡುತ್ತಲೇ ಮನೆಗೆ ತಲುಪಿದ.

ಊರಿನ ಜನರೆಲ್ಲ ಜಯಣ್ಣನ ಮನೆಯ ಮುಂದೆ ಸೇರಿದರು. ಜಯಣ್ಣ ಊರಿನ ಜನರಿಗೆಲ್ಲ ತಿಳಿಸಿದ. 'ಊರ ಹೊರಗಿರುವ ದೊಡ್ಡ ಗುಹೆಯಲ್ಲಿ ಒಂದು ಬ್ರಹ್ಮಾಂಡದಂತಹ ಪ್ರಾಣಿ ಬಂದು ಸೇರಿಕೊಂಡಿದೆ. ಅದು ಈ ಶಬ್ದ ಮಾಡುತ್ತಿದೆ. ಇಲ್ಲಿಯವರೆಗೂ ಯಾರೂ ಕೇಳಿರದ, ಯಾರೂ ಕಂಡಿರದ ಪ್ರಾಣಿಯದು. ಹೀಗೆ ಕೂಗಬೇಡ. ನಿನಗೇನು ಬೇಕು ಹೇಳಿದರೆ ನಾವು ಊರಿನವರೆಲ್ಲ ಸೇರಿಕೊಡುತ್ತೇವೆ. ನೀನು ಹೀಗೆ ಕೂಗುವುದರಿಂದ ನಮ್ಮ ಜನರಿಗೆ ತುಂಬ ತೊಂದರೆ ಆಗುತ್ತಿದೆ. ಮಕ್ಕಳು ಹೆದರಿ ಅಳುತ್ತಿದ್ದಾರೆ. ದಯವಿಟ್ಟು ಕೂಗುವುದನ್ನು ನಿಲ್ಲಿಸು' ಎಂದು ಪ್ರಾಣಿಯ ಮುಂದೆ ವಿನಂತಿಸಿದ್ದನ್ನು ಅವನು ಜನರಿಗೆಲ್ಲ ತಿಳಿಸಿದ.

'ಒಬ್ಬರೇ ಹೋದರೆ ಅದು ನಮ್ಮನ್ನೇ ಹೆದರಿಸುತ್ತದೆ. ಇನ್ನೊಮ್ಮೆ ಎಲ್ಲರೂ ಸೇರಿ ಆ ಪ್ರಾಣಿಯ ಹತ್ತಿರ ಹೋಗೋಣ, ಹೀಗೆ ಶಬ್ದ ಮಾಡಬೇಡ. ಇದರಿಂದ ನಮಗೆ ಹೊಲ ಗದ್ದೆಗಳಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. ನಮ್ಮ ಕಿವಿಗಳು ಕಿವುಡಾಗುತ್ತವೆ. ದಯವಿಟ್ಟು ನೀನು ಎಲ್ಲಿಂದ ಬಂದಿರುವೆಯೋ ಅಲ್ಲಿಗೇ ವಾಪಸ್ ಹೋಗಿಬಿಡು ಎಂದು ಬೇಡಿಕೊಳ್ಳೋಣ' ಎಂದು ಜಯಣ್ಣ ಎಲ್ಲರನ್ನೂ ಪ್ರಾರ್ಥಿಸಿಕೊಂಡ. ಆದರೆ ಯಾರೊಬ್ಬರಿಗೂ ಆ ಪ್ರಾಣಿಯ ಮುಂದೆ ಹೋಗಲು ಧೈರ್ಯವೇ ಇರಲಿಲ್ಲ. ಆದ್ದರಿಂದ ಯಾರೂ ಜಯಣ್ಣನೊಂದಿಗೆ ಗುಹೆಗೆ ಹೋಗಲು ಸಿದ್ಧರಾಗಲಿಲ್ಲ. ಜಯಣ್ಣನಿಗೂ ತಾನೊಬ್ಬನೇ ಆ ಗುಹೆಗೆ ಪುನಃ ಹೋಗುವ ಧೈರ್ಯವಾಗಲಿಲ್ಲ. ಒಂದು ದಿನ ಕಳೆಯಿತು. ಎರಡು ದಿನ, ಮೂರು ದಿನ ಹೀಗೇ ಒಂದು ವಾರ, ಹದಿನೈದು ದಿನಗಳೂ ಕಳೆದವು. ಪ್ರಾಣಿಯ ಕೂಗು ಇದ್ದಕ್ಕಿದ್ದ ಹಾಗೆ ಶುರುವಾಗುತ್ತಿತ್ತು. ಇದ್ದಕ್ಕಿದ್ದಂತೆ ನಿಲ್ಲುತ್ತಿತ್ತು. ಕೆಲವೊಮ್ಮೆ ಮೈಲು ದೂರಕ್ಕೆ ಕೇಳಿಸುವಂತೆ, ಕೆಲವೊಮ್ಮೆ ಅರ್ಧ ದಿನದ ಹೊತ್ತೂ ಕೂಗುತ್ತಲೇ ಇರುವಂತೆ, ಕಿವಿ ಗಡಚಿಕ್ಕುವ ಶಬ್ದ. ಊರು ಬಿಟ್ಟು ದೂರ ಓಡಿ ಹೋಗೋಣ ಎನಿಸುವಂತಹ ಶಬ್ದ.

ಆ ದಿನ ಜಯಣ್ಣ ಒಂದು ನಿರ್ಧಾರಕ್ಕೆ ಬಂದ. ನಾನು ಸತ್ತರೂ ಚಿಂತೆ ಇಲ್ಲ. ಒಬ್ಬನೇ ಆದರೂ ಸರಿ. ಆ ಪ್ರಾಣಿಯ ಬಳಿ ಇನ್ನೊಮ್ಮೆ ಹೋಗಬೇಕು. ಅದಕ್ಕೆ ಕೂಗಬೇಡವೆಂದು ಪ್ರಾರ್ಥಿಸಬೇಕು. ಅದು ನನ್ನನ್ನು ತಿಂದರೂ ಪರವಾಗಿಲ್ಲ. ಊರ ಜನರಾದರೂ ಸುಖವಾಗಿರಲಿ ಎಂದುಕೊಂಡ. ಪುನಃ ಕಿವಿಗೆ ಭದ್ರವಾಗಿ ಹತ್ತಿಯ ಉಂಡೆಗಳನ್ನು ಇಟ್ಟುಕೊಂಡು ಅದರ ಮೇಲೆ ಮಫ್ಲರ್ ಕಟ್ಟಿಕೊಂಡು, ಅವನು ಊರ ಹೊರಗಿನ ಗುಹೆಗೆ ನಡೆದ. ಸದ್ಯ ರಾಕ್ಷಸ ಪ್ರಾಣಿ ಮಲಗಿತ್ತು. ಅದರ ಬಾಯಿ ಬಾವಿಯಂತೆ ದೊಡ್ಡದಾಗಿತ್ತು. ಅಷ್ಟು ದೊಡ್ಡ ಬಾಯಿಯನ್ನು ತೆರೆದಿಟ್ಟುಕೊಂಡು ಅದು ಗೊರಕೆ ಹೊಡೆಯುತ್ತಿತ್ತು.

ಜಯಣ್ಣನಿಗೆ ಈಗ ಏನು ಮಾಡಬೇಕು ಎನ್ನುವುದು ಹೊಳೆಯಲಿಲ್ಲ. ಶಬ್ದ ಮಾಡಬೇಡ ಎಂದು